
# ದೇವರಮನೆ ಬೆಟ್ಟ



## ಮಾತಿಲ್ಲಿ ಮೌನ, ಮೌನ ಆಗುವುದು ಧ್ಯಾನ

■ ಕೆ.ಟಿ. ಜಯಶ್ರೀ

ಹೊರಗಣ್ಣಿನ ನೋಟದೊಂದಿಗೆ ಒಳಗಣ್ಣನ್ನು ತೆರೆದು ನೋಡಿದರೆ ಅದೊಂದು ಅನಿರ್ವಚನೀಯ ಅನುಭವ. 'ದೇವರಮನೆ' ತನ್ನ ಅಸಾಧಾರಣ ಚೆಲುವಿನಿಂದ ನೋಡುಗರನ್ನು ಮಂತ್ರಮುಗ್ಧರನ್ನಾಗಿಸುತ್ತದೆ. ಈ ಪ್ರಕೃತಿಮನೆ ಪ್ರವಾಸಿಗರ, ಚಾರಣಿಗರ ಅಚ್ಚುಮೆಚ್ಚು.

ಮೂಡಿಗೆರೆಯಿಂದ ದೇವರಮನೆಗೆ ಸಾಗುವ ದಾರಿಯ ಎರಡೂ ಬದಿಯಲ್ಲಿ ಕಾಫಿ ತೋಟಗಳಿದ್ದು, ವಯ್ಯಾರದಿಂದ ಸಾಗುವ ತಿರುವು ರಸ್ತೆಯ ಮೂಲಕ ಇಪ್ಪತ್ತು ಕಿ.ಮೀ. ಕ್ರಮಿಸಬೇಕು. ಕೆಲವೆಡೆ ಕಡಿದಾದ ರಸ್ತೆಯೂ ಇದೆ. ಗುತ್ತಿಯಿಂದ 5 ಕಿ.ಮೀ. ದೂರವುಳ್ಳ ದೇವರಮನೆಯನ್ನು ತಲುಪುತ್ತಿದ್ದಂತೆ ಅಲ್ಲಿನ ಪರಿಸರ ನಮ್ಮೊಳಗೆ ನವೋಲ್ಲಾಸ ಮೂಡಿಸುತ್ತದೆ.

ದೇವರ ದರ್ಶನ ಮಾಡಿ ಬೆಟ್ಟವನ್ನು ಏರಲು ಆರಂಭಿಸಬಹುದು. ಸಮುದ್ರ ಮಟ್ಟದಿಂದ 2 ಸಾವಿರ ಅಡಿ ಎತ್ತರದಲ್ಲಿರುವ ಬೆಟ್ಟ ಅಷ್ಟೇನೂ ಕಡಿದಾಗಿಲ್ಲ. ಇನ್ನೂರು ಮೀಟರ್ ಏರಿದರೆ ವ್ಯೂ ಪಾಯಿಂಟ್ ಸಿಗುತ್ತದೆ. ಎತ್ತರದ ಬೋಳು ಬೆಟ್ಟಗಳ ನಡುವೆ ಶೋಲಾ ಅರಣ್ಯವನ್ನು ಒಡಲೊಳಗಿರಿಸಿಕೊಂಡು ಹಚ್ಚ ಹಸಿರಿನಿಂದ ಕಂಗೊಳಿಸುವ ಕಣಿವೆ, ಅದರ ಮೇಲೆ ಆವೃತವಾಗುವ ಮಂಜಿನ ಹಾಸು ನೋಡುಗರಿಗೆ ಸ್ವರ್ಗದಂತೆ ಭಾಸವಾಗುತ್ತದೆ. ಬೆಟ್ಟಗಳ ಮೇಲ್ಮೈ ಹುಲ್ಲುಗಾವಲಿನಿಂದ ಆವೃತ್ತವಾಗಿದ್ದು ನೋಡಲು ಮನೋಹರವಾಗಿದೆ. ಅಲ್ಲಲ್ಲಿ ಹಳದಿ ಹಾಗೂ ತಿಳಿ ಗುಲಾಬಿ ಬಣ್ಣದ ಹೂವರಳಿ ನಗೆಬೀರುವ ಪುಟ್ಟ ಪುಟ್ಟ ಸಸ್ಯ ಸಂಕುಲವಿದೆ.

ಹಾಲ್ನೊರೆಯ ತೆಳ್ಳನೆ ಜಲಧಾರೆಗಳು ಹಸಿರು ಕಣಿವೆಗೆ ಕ್ಷೀರಾಭಿಷೇಕ ನಡೆಸುವ ದೃಶ್ಯ ಮನಮೋಹಕ. ಮಂಜಿನ ತೆರೆಮರೆಯಾಟ ಇಲ್ಲಿನ ವಿಶೇಷ. ಹಸಿರು ಹೊದ್ದ ಗಿರಿಶ್ರೇಣಿಯನ್ನು ಅಪ್ಪಿಕೊಳ್ಳುತ್ತಾ ಸಾಗಿ ಹಾಗೆಯೇ ಮುಗಿಲನ್ನು ಮುತ್ತಿಕ್ಕುವ ಸಂಭ್ರಮ. ಆಗ ಪಚ್ಚೆ ಶಿಖರಗಳು ಮಾಯವಾಗಿ ಎತ್ತ ನೋಡಿದರೂ ಬೆಳ್ಳಂಬೆಳ್ಳನೆಯ ಮಂಜು. ಅದು ಅರೆ ಕ್ಷಣವಷ್ಟೆ. ಮತ್ತೆ ತೆರೆಮರೆ ಆಟ ನಡೆಸುತ್ತಲೇ ಸುಂದರ ದೃಶ್ಯಕಾವ್ಯ ಮೂಡಲಾರಂಭಿಸುತ್ತದೆ. ಸನಿಹ ನಿಂತವರು ಅಸ್ಪಷ್ಟವಾಗಿ ಕಾಣುವಂತೆ ಆವರಿಸಿಕೊಳ್ಳುವ ಮಂಜಿನ ತಣ್ಣನೆಯ ಸ್ಪರ್ಶದಿಂದ ಮೈಮನವೆಲ್ಲ ಪುಳಕ! ಕುಳಿರ್ಗಾಳಿಯ ರಭಸಕ್ಕೆ ನಿಂತಲ್ಲಿಯೇ ನರ್ತನ! ಇಲ್ಲಿ ಮಾತು ಮೌನವಾಗಬೇಕು, ಮೌನ ಧ್ಯಾನವಾಗಬೇಕು. ಆಗ ಮಾತ್ರ ಪ್ರಕೃತಿಯ ಪಿಸುಮಾತು, ಹಕ್ಕಿಗಳ ಇಂಚರ, ಕಣ್ಣಿಗೆ ಕಾಣದ ಕ್ರಿಮಿಕೀಟಗಳ ಸದ್ದನ್ನಾಲಿಸಲು ಸಾಧ್ಯ.

ಮೊದಲಿಗೆ ದರ್ಶನವಾಗುವುದು ಎಂಟನೂರು ವರ್ಷಗಳಷ್ಟು ಪುರಾತನವಾದ ಕಾಲಭೈರವೇಶ್ವರನ ದೇವಾಲಯ. ದೇವಾಲಯದ ಮುಂಭಾಗದಲ್ಲಿ ಸುಂದರ ಹಾಗೂ ವಿಶಾಲವಾದ ಕೊಳವಿದೆ. ಸ್ಥಳೀಯರ ಮಾಹಿತಿಯಂತೆ, ಈ ದೇವಾಲಯ ಚೋಳರ ಕಾಲದಲ್ಲಿ ನಿರ್ಮಿತವಾದುದು. ಪುರಾಣದ ಪ್ರಕಾರ ಶಿವನು ನಂದಿಗೆ, ಭೂಲೋಕಕ್ಕೆ ತೆರಳಿ ಅಲ್ಲಿನ ವಿದ್ಯಮಾನವನ್ನು ತಿಳಿದುಬರುವಂತೆ ಅಪ್ಪಣೆ ಮಾಡುತ್ತಾನೆ. ಆದರೆ ನಂದಿ, ಶಿವನಿಗೆ ಜನರ ಕಷ್ಟಗಳ ಕುರಿತು ಸರಿಯಾದ ಮಾಹಿತಿ ನೀಡದೆ 'ಎಲ್ಲವೂ ಸರಿಯಾಗಿದೆ' ಎಂದು ಸುಳ್ಳು ಹೇಳುತ್ತಾನೆ. ಇದನ್ನರಿತ ಶಿವನು ನಂದಿಯನ್ನು ಭೂಮಿಗೆ ಕಳುಹಿಸಿ, ಅಲ್ಲಿನ ಜನರಿಗೆ ಉಳುಮೆ ಮಾಡಲು ನೆರವಾಗುವಂತೆ ಆಜ್ಞಾಪಿಸುತ್ತಾನೆ. ತಾನೂ ಸಹ ನಂದಿಯ ಹಿಂದೆಯೇ ತೆರಳಿ ಭೈರವನ ರೂಪದಿ ಇಲ್ಲಿ ನೆಲೆಸಿದ್ದಾನೆ ಎಂಬ ಪ್ರತೀತಿ. ಸ್ಥಳೀಯರ ಕುಲದೈವವೂ ಆಗಿರುವ ಭೈರವೇಶ್ವರನ ದೇವಾಲಯ ನೋಡಲು ಸುಂದರವಾಗಿದೆ.

ಹಾಸನದಿಂದ 91 ಕಿ.ಮೀ., ಬೆಂಗಳೂರಿನಿಂದ 260 ಕಿ.ಮೀ. ದೂರವಿರುವ ದೇವರಮನೆಯಲ್ಲಿ ದೇವಾಲಯ ಹಾಗೂ ಸಣ್ಣದೊಂದು ಅಂಗಡಿ ಹೊರತುಪಡಿಸಿದರೆ ಬೇರೇನೂ ಇಲ್ಲ. ಪ್ರವಾಸಿಗರು ತಂಗಲು ಹತ್ತಿರದಲ್ಲಿ ಹೋಂಸ್ಟೇಗಳಿವೆ. ಮೂಡಿಗೆರೆ ಅಥವಾ ಚಿಕ್ಕಮಗಳೂರಿನಲ್ಲೂ ತಂಗಬಹುದು.

ಪ್ರತಿಕ್ರಿಯಿಸಿ: **feedback@sudha.co.in**

ಅನಿವಾರ್ಯ ಕಾರಣಗಳಿಂದ ಈ ಸಂಚಿಕೆಯಲ್ಲಿ ಪದಬಂಧ ಹಾಗೂ ಪ್ರಶ್ನಾಂಕಣ ಪ್ರಕಟಗೊಂಡಿಲ್ಲ. —ಸಂ